ಚುಟುಕು ಸುದ್ದಿ

ಹೋರಾಟ-ತ್ಯಾಗಕ್ಕೂ ಸಿದ್ಧ: ಷಡಕ್ಷರಿ

ಸವಣೂರು: ಶತಮಾನ ಕಂಡಿರುವ ರಾಜ್ಯ ನೌಕರರ ಸಂಘವನ್ನು ಸಾಕಷ್ಟು ಜನ ತ್ಯಾಗ ಹೋರಾಟದ ಮೂಲಕ ಕಟ್ಟಿದ್ದಾರೆ. ಈ ಸಂಘಕ್ಕಾಗಿ ದುಡಿಯಲು ಸರ್ಕಾರಿ ನೌಕರರು ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಅವರಿಗಾಗಿ ನಾನು ಯಾವುದೇ ಹೋರಾಟ ಮತ್ತು ತ್ಯಾಗಕ್ಕೂ ಸಿದ್ಧ ಎಂದು ರಾಜ್ಯ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಹೇಳಿದರು.

ಪಟ್ಟಣದ ದೊಡ್ಡಹುಣಸೆ ಕಲ್ಮಠದ ಶ್ರೀ ಚನ್ನಬಸವೇಶ್ವರ ಮಂಗಲ ಭವನದಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಸವಣೂರು ಶಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ತಾಲೂಕಾ ಮಟ್ಟದ ನೌಕರರ ಕಾರ್ಯಾಗಾರ ಹಾಗೂ ಮಹಿಳಾ ದಿನಾಚರಣೆ ಮತ್ತು ನೌಕರರ ಸಮಾವೇಶ-2025 ಕಾರ್ಯಕ್ರಮದಲ್ಲಿ ಪದಗ್ರಹಣ ನಾಮಫಲಕ ಉದ್ಘಾಟಿಸಿ ಅವರು ಮಾತನಾಡಿದರು.

ಎನ್‌ಪಿಎಸ್ ಬದಲಿಗೆ ಓಪಿಎಸ್ , ಕೇಂದ್ರ ವೇತನವನ್ನು ರಾಜ್ಯ ನೌಕರರಿಗೂ ಜಾರಿಗೊಳಿಸುವಂತೆ ರಾಜ್ಯ ಸರ್ಕಾರದ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದೇನೆ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಆದರೆ ಸರ್ಕಾರಿ ನೌಕರರಿಗೆ ಗೌರವದ ಜೀವನ ನಡೆಸಲು ಬೇಕಾಗುವ ಎಲ್ಲ ಸೌಲಭ್ಯಗಳನ್ನು ಕೊಡಿಸಿಯೇ ಸಿದ್ಧ ಎಂದು ಭರವಸೆ ನೀಡಿದರು

ಶಾಸಕ ಯಾಸೀರ ಪಠಾಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ಭಾಗದ ಶಾಸಕನಾಗಿ ಅವರ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೆಳದರ್ಜೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಈ ಕುರಿತು ನೇರವಾಗಿ ತಮಗೆ ಮಾಹಿತಿ ನೀಡಿದಲ್ಲಿ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಬಸವರಾಜ ಹೊಸಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯ ಪ್ರೊ.ಎಸ್.ವಿ. ಸಂಕನೂರ ಮಾತನಾಡಿದರು. ಕಾರ್ಯಕ್ರಮದ ಸಾನಿಧ್ಯವನ್ನು ಪಟ್ಟಣದ ದೊಡ್ಡಹುಣಸೇ ಕಲ್ಮಠದ ಚನ್ನಬಸವ ಸ್ವಾಮೀಜಿ ಮತ್ತು ಹೂವಿನ ಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ವಹಿಸಿದ್ದರು. ಧಾರವಾಡದ ಅಕ್ಷರ ಮಾತೆ ಲೂಸಿ ಸಾಲ್ದಾನಾ ತಾಲೂಕಿನ ಮಹಿಳಾ ಸಾಧಕಿಯರ ಕಿರು ಹೊತ್ತಿಗೆ ಬಿಡುಗಡೆ ಮಾಡಿದರು.

ತಾಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಸುಭಾಸ ಮಜ್ಜಗಿ, ಸವಣೂರು ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರ, ಜಿಲ್ಲಾ ಕ.ರಾ.ಸ.ನೌ.ಸಂ ಅಧ್ಯಕ್ಷ ಮಲ್ಲೇಶ ಕರಿಗಾರ, ತಹಶೀಲ್ದಾರ ಭರತರಾಜ ಕೆ.ಎನ್., ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಫ್.ಬಾರ್ಕಿ, ತಾಲೂಕು ಸಂಘದ ಹಿರಿಯ ಉಪಾಧ್ಯಕ್ಷ ರಾಮಕೃಷ್ಣ ಘಾಟಗೆ, ಖಜಾಂಚಿ ಪಟೇಲ್ ಮಹ್ಮದ ಅಸಗರ ಸೇರಿದಂತೆ ಪದಾಧಿಕಾರಿಗಳು ಹಾಗೂ ನಿರ್ದೇಶಕರು, ತಾಲೂಕಿನ ಎಲ್ಲ ಸರ್ಕಾರಿ ಇಲಾಖೆಯ ಉದ್ಯೋಗಿಗಳು ಇದ್ದರು.

ಕಾಲುವೆ-ಸೇವಾ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಹಾನಗಲ್: ತಾಲೂಕಿನ ವರ್ದಿ ಗ್ರಾಮದಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ 91 ಲಕ್ಷ ರೂ. ವೆಚ್ಚದಲ್ಲಿ ಶಿಂಗಾಪುರ ಕಾಲುವೆ ಮತ್ತು ಸೇವಾ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಶಿಂಗಾಪುರ ಕಾಲುವೆ ಅಭಿವೃದ್ಧಿ ಪಡಿಸಬೇಕು ಎನ್ನುವುದು ಹತ್ತಾರು ವರ್ಷಗಳ ಬೇಡಿಕೆಯಾಗಿತ್ತು. ಕಾಲುವೆ ಬಹುತೇಕ ಮುಚ್ಚಿ ಹೋಗಿದ್ದರಿಂದ ನರೇಗಲ್ ಕೆರೆ ನೀರು ಮುಂದೆ ಹರಿದು ಶಿಂಗಾಪುರ ಕೆರೆಗೆ ತಲುಪದೇ ಹೊಲ, ಗದ್ದೆಗಳಿಗೆ ನುಗ್ಗಿ, ಗ್ರಾಮಕ್ಕೆ ನುಗ್ಗಿ ಅವಾಂತರ ಸೃಷ್ಟಿಸುತ್ತಿತ್ತು. ಹಾಗಾಗಿ ಆದ್ಯತೆ ಮೇರೆಗೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಕಾಲುವೆ ಮೂಲಕ ನೀರು ಶಿಂಗಾಪುರ ಕೆರೆಯ ಒಡಲು ಭರ್ತಿ ಮಾಡುವುದರಿಂದ 700 ಎಕರೆಗೂ ಹೆಚ್ಚು ಪ್ರದೇಶಕ್ಕೆ ಭತ್ತದ ನಾಟಿಗೆ ಅನುಕೂಲವಾಗಲಿದ್ದು, ಕಾಲುವೆಗೆ ಮರುಜೀವ ನೀಡಿದ ಖುಷಿ ಇದೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು. ರೈತರು ಮಾಡಿದ ಮನವಿಗೆ ಸ್ಪಂದಿಸಿದ ಶಾಸಕ ಮಾನೆ, ಕೋಡಿ ಮತ್ತು ಸಿಡಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಅನುದಾನ ಬಿಡುಗಡೆಯಾಗಲಿದೆ ಎಂದು ತಿಳಿಸಿದರು. ಗ್ರಾಪಂ ಸದಸ್ಯರಾದ ಫಕಿರೇಶ ಅಗಸಿಬಾಗಿಲ, ಈರಪ್ಪ ಬೂದಿಹಾಳ, ರೇವಣಪ್ಪ ಬಾರ್ಕಿ, ಬಸವರಾಜ ಬಾರ್ಕಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಡಿಯವರ, ಮುಖಂಡರಾದ ಕಲವೀರಪ್ಪ ಪವಾಡಿ, ಮಹಬಲೇಶ್ವರ ಸವಣೂರ, ಹೂವಯ್ಯ ಹಿರೇಮಠ, ರಜಾಕ್ ನರೇಗಲ್, ಸುರೇಶ ಮರಿಲಿಂಗಣ್ಣನವರ ಇದ್ದರು.

ಆಹಾರ ಹುಡುಕಿ ಕಾಡಿನಿಂದ ನಾಡಿಗೆ ಬಂದ ಎರಡು ಗಜರಾಜರು

ಜೋಳದ ಹೊಲ-ತೋಟದಲ್ಲಿ ಲಗ್ಗೆ ಇಟ್ಟ ಕಾಡಾನೆಗಳಿಂದ ಬೆಳೆ-ಬಾಳೆಗಿಡ ನಾಶ

ಉದಯಕಾಲ ನ್ಯೂಸ್

ಶಿಗ್ಗಾಂವಿ: ಭಾನುವಾರ ಬೆಳಗಿನ ಜಾವ ಪಟ್ಟಣದ ಐತಿಹಾಸಿಕ ನಾಗನೂರ ಕೆರೆಯಲ್ಲಿ ಈಜಾಡಿ ನಂತರ ರಸ್ತೆಯಲ್ಲಿ ಸಂಚರಿಸಿದರಿಂದ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿತು.

ಕೆಲವರು ಆನೆ ಸಾಗುತ್ತಿದ್ದಂತೆ ಅದರ ಹಿಂಭಾಗ ಸಂಚರಿಸಿ ಮೊಬೈಲ್ ನಲ್ಲಿ ಫೋಟೋ ಸೇಲ್ಫಿ ತೆಗೆಯುತ್ತಿದ್ದರು. ನಸುಕಿನ ಜಾವ ವಾಕಿಂಗ್ ಹೋಗುತ್ತಿದ್ದ ಜನ ಮೊದಲು ಆನೆ ಕಂಡು ದಂಗಾದರು.ಈ ವಿಷಯ ಪಟ್ಟಣದಲ್ಲಿ ಹರುಡುತ್ತಿದ್ದಂತೆ ಜನರು ಆಗಮಸಿ ಆನೆ ನೋಡಲು ಮುಗಿಬಿದ್ದರು.

ಸುಮಾರು ಎರಡು ತಾಸು ಈಜಾಡಿ, ನಂತರ ಕೆರೆಯ ಪಕ್ಕದಲ್ಲಿ ಇರುವ ತೋಟದ ಒಳಗೆ ನುಗ್ಗಿ ಅನಂತರ ಅಲ್ಲಿಂದ ಕಾಲುಕ್ಕಿತ್ತು ಹೊಲದಲ್ಲಿ



ಸಾಗಿ ಸಿದ್ದನಗುಡ್ಡದ ಹತ್ತಿರ ಹೋಗಿದೆ.ಎಂದು ಸಾರ್ವಜನಿಕರು ಹೇಳಿಕೆ ನೀಡಿದರು.

ಅದೃಷ್ಟವಶಾತ್ ಯಾವುದೇ ಜೀವ ಹಾನಿ ಆಸ್ತಿ ಹಾನಿ ಸಂಭವಿಸಿಲ್ಲ, ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ದಾವಿಸಿದ ಧುಂಡಶಿ ವಲಯ ಅರಣ್ಯ ಅಧಿಕಾರಿಗಳು ರವಿಕುಮಾರ ಪುರಾಣಿಕಮಠ. ಶಿಗ್ಗಾಂವಿ ಉಪ ವಲಯ ಅರಣ್ಯ ಅಧಿಕಾರಿಗಳು ಪರಶುರಾಮ ಮಣಕೂರ, ಧುಂಡಶಿ ಉಪ ವಲಯ ಅರಣ್ಯ ಅಧಿಕಾರಿಗಳು ಮುತ್ತು ಚಲವಾದಿ ಹಾಗೂ ಧುಂಡಶಿ ವಲಯದ ಗಸ್ತು ಅರಣ್ಯ ಪಾಲಕರು ಸಿಬ್ಬಂದಿ ವರ್ಗ ಆಗಮಸಿ ಕಾಡಾನೇಗಳ ಹೆಜ್ಜೆ ಗುರುತು ಹಿಡಿದುಕೊಂಡು ಎಲ್ಲೆಲ್ಲಿ ಸಂಚರಿಸಿದೆ ಅದರ ಜಾಲ ಹಿಡಿದು ಸಿದ್ದನಗುಡ್ಡದ ಹತ್ತಿರ ಬಂದಿವೆ ಎಂದು ಮಾಹಿತಿ ಸಿಕ್ಕ ಮೇಲೆ ಅಲ್ಲೆ ಅಧಿಕಾರಿಗಳು ಮೊಕ್ಕಾಂ ಹೋಡಿದ್ದಾರೆ.

ಶಿಗ್ಗಾಂವಿ ತಾಲ್ಲೂಕಿನ ಜನತೆಗೆ, ಹಾಗೂ ರೈತರಿಗೆ ರಾತ್ರಿ ಹೊಲಗಳಿಗೆ ನೀರು ಹಾಯಿಸುವಾಗ ಜಾಗೃತಿ ವಹಿಸಲು ಸೂಚನೆ ನೀಡಿದರು.ಮೇಲಾಧಿಕಾರಿಗಳ ಮಾನವೀಯತೆ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಿದರು.

ನಮಗೆ ಇದ್ದ ಮಾಹಿತಿ ಪ್ರಕಾರ ಎರಡು ಗಂಡು ಆನೆಗಳು ನಾಗನೂರು ಕೆರೆಯಲ್ಲಿ ಕಂಡ ಬಗ್ಗೆ ಮಾಹಿತಿ ಬಂದ ಕೂಡಲೇ ತಕ್ಷಣ ಸಿಬ್ಬಂದಿ ಯೊಂದಿಗೆ ಸ್ಥಾನಿಕವಾಗಿ ಪರಿಶೀಲನೆ ಮಾಡಲಾಗಿ ಸಿದ್ದನಗುಡ್ಡ ಅರಣ್ಯ ಪ್ರದೇಶದಲ್ಲಿ ಹೋಗಿರುವುದಾಗಿ ಕಂಡು ಬಂದಿದ್ದು ಸುತ್ತ ಮುತ್ತಲಿನ ಜನರು ಜಾಗೃತಯಿಂದ ಇರಬೇಕು ರಾತ್ರಿ ಹೊತ್ತು ಒಬ್ಬರೇ ತೀರಿಗಾಡಬಾರದು, ಇವು ಪ್ರತಿ ವರ್ಷ ಹೆಚ್ಚು ಕಡಿಮೆ ಇದೆ ಸಮಯದಲ್ಲಿ ಬಂದು ಸ್ವಲ್ಪ ದಿವಸ ಇದ್ದು ಮರಳಿ ತಮ್ಮ ಖಾಯಂ ಅರಣ್ಯ ಪ್ರದೇಶಕ್ಕೆ ಮರಳುವುತ್ತವೆ, ಜನರು ಭಯ ಪಡುವ ಅಗತ್ಯ ಇಲ್ಲಾ ಇಲಾಖೆ ಪ್ರತಿ ವರ್ಷದಂತೆ ಈ ಸಲವೂ ಕೂಡ ಅಗತ್ಯ ಕ್ರಮ ಕೈಗೊಂಡಿದ್ದು ಪೊಲೀಸ್ ಇಲಾಖೆವರೂ ಕೂಡ ಸಂಪರ್ಕದಲ್ಲಿ ಇದ್ದು ಅಗತ್ಯ ಬಿದ್ದರೆ ಸಹಾಯಕ್ಕೆ ತಮ್ಮ ಸಿಬ್ಬಂದಿ ಸಿದ್ಧರಿರುವುದಾಗಿ ತಿಳಿಸಿರುತ್ತಾರೆ.

ಮಹಿಳೆ ಸಮಾಜದ ಆಧಾರ ಸ್ಥಂಭ: ಶಶಿಕಲಾ ಪಾಟೀಲ

ಉದಯಕಾಲ ನ್ಯೂಸ್

ರೋಣ: ತಾಯಿಯಾಗಿ, ಸಹೋದರಿಯಾಗಿ, ಹೆಂಡತಿಯಾಗಿ, ಮಗಳಾಗಿ ಮಹಿಳೆ ಕುಟುಂಬದ ಸರ್ವತೋಮುಖ ಪ್ರಗತಿಗೆ ತನ್ನ ಜೀವನವನ್ನು ಮುಡಿಪಾಗಿಟ್ಟು ಕೆಲಸ ಮಾಡುತ್ತಾಳೆ ಸಮಾಜದ ಸುಸ್ಥಿರ ಅಭಿವೃದ್ಧಿ ಮತ್ತು ಪ್ರಗತಿಗೆ ಮಹಿಳೆ ಆಧಾರ ಸ್ಥಂಭವಾಗಿದ್ದಾಳೆ ಎಂದು ಕದಳಿ ಮಹಿಳಾ ವೇದಿಕೆ ಹಾಗೂ ಸ್ಪಂದನಾ ಮಹಿಳಾ ಮಂಡಳದ ಅಧ್ಯಕ್ಷೆ ಶಶಿಕಲಾ ಪಾಟೀಲ ಹೇಳಿದರು.

ಭಾನುವಾರ ಪಟ್ಟಣದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಕದಳಿ ಮಹಿಳಾ ವೇದಿಕೆ, ಶರಣ ಸಾಹಿತ್ಯ ಪರಿಷತ್ ಹಾಗೂ ಸ್ಪಂದನಾ ಮಹಿಳಾ ಮಂಡಳ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಅನುಷ್ಠಾನ ಸಮಿತಿಯ ವ್ಯವಸ್ಥಾಪಕ ಹಾಗೂ ಮೇಘ ಶಾಲಾ ಸಂಸ್ಥೆ ಬೆಂಗಳೂರ ಆಶ್ವಿನಿ ದೊಡ್ಡಲಿಂಗಪ್ಪನವರ ಮಾತನಾಡಿ ಮಹಿಳೆ ಸಮಾಜದ ಮುಖ್ಯ ವಾಹಿನಿಗೆ ಧೈರ್ಯವಾಗಿ ಬರಬೇಕು, ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಘನನೀಯ ಕೊಡುಗೆ ನೀಡುವ ಸಾಮರ್ಥ್ಯ ಆಕೆಗಿದ್ದು ಅದನ್ನು ಪ್ರೋತ್ಸಾಹಿಸುವಲ್ಲಿ ಸಮಾಜ ಮತ್ತು ಸಂಘ ಸಂಸ್ಥೆಗಳು ಆಕೆಗೆ ಬೇಕಾದ ಸಹಾಯ, ಸಹಕಾರ, ಬೆಂಬಲ ನೀಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ಗೀತಾ ಮಾಡಲಗೇರಿ ಮಾಜಿ ಅಧ್ಯಕ್ಷೆ ರಂಗಮ್ಮ ಭಜಂತ್ರಿ, ಜಯಶ್ರೀ ಹೊಸಮನಿ, ಮಂಜುಳಾ ರೇವಡಿ, ನಾಜಬೇಗಂ ಯಲಿಗಾರ, ಗೀತಾ ಯಾಳಗಿ, ಅನಸಮ್ಮ ವಾಲಿ, ಲಕ್ಷ್ಮಿ ಗಡಗಿ, ವಿದ್ಯಾ ದೊಡ್ಡಮನಿ, ವಿಜಯಲಕ್ಷ್ಮಿ ಚಿತ್ರಗಾರ, ಚನ್ನಬಸಮ್ಮ ಹಿರೇಮಠ, ಜ್ಯೋತಿ ರಡ್ಡೆರ, ರಮಜಮ್ಮ ಮುಗಳಿ, ಮಧು ರಡ್ಡೆರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವಕ್ಕೆ ಹಾನಗಲ್ಲ ನಗರ ಶೃಂಗಾರ

ಉದಯಕಾಲ ನ್ಯೂಸ್

ಹಾನಗಲ್: ಮಾ. 18ರಿಂದ 26ರ ವರೆಗೆ ನಡೆಯಲಿರುವ ಇಲ್ಲಿನ ಗ್ರಾಮ(ದ್ಯಾಮವ್ವ) ದೇವಿ ಜಾತ್ರಾ ಮಹೋತ್ಸವಕ್ಕೆ ಹಾನಗಲ್ಲ ನಗರವು ಶೃಂಗಾರಗೊಂಡಿದೆ. ನಗರದಾದ್ಯಂತ ಬೀದಿ ದೀಪದ ಕಂಬಗಳಿಗೆ ಬಣ್ಣ-ಬಣ್ಣದ ದೀಪಗಳಿಂದ ಹಾಗೂ ಕೇಸರಿ ಬಟ್ಟೆಯಿಂದ ಅಲಂಕರಿಸಲಾಗಿದೆ.

ಗ್ರಾಮದ ಮುಖ್ಯ ರಸ್ತೆಯಲ್ಲಿರುವ ಗ್ರಾಮದೇವಿಯ ದೇವಸ್ಥಾನದಿಂದ ಊರಿನ ಪ್ರಮುಖ ರಸ್ತೆಗಳಾದ ಟಿ.ಜಿ ರಸ್ತೆ, ಕುಮಾರೇಶ್ವರ ಸರ್ಕಲ್, ಗಾಂಧಿ ಸರ್ಕಲ್ ವರೆಗೆ ಹಾಗೂ ಊರಿನ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರದಿಂದ ಶೃಂಗರಿಸಲಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಅಧಿಕಾರಿಗಳು ದೇವಿಯ ಜಾತ್ರಾ ಮಹೋತ್ಸವದ ನಿಮಿತ್ತ, ಊರಿನ ಎಲ್ಲಾ ಓಣಿಗಳಲ್ಲಿ ಸ್ವಚ್ಛತಾ ಕಾರ್ಯವನ್ನು, ಕುಡಿಯುವ ನೀರು ಸೇರಿದಂತೆ ಜಾತ್ರೆ ಪ್ರಾರಂಭದಿಂದ ಮುಕ್ತಾಯದ ವರೆಗೂ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ಕ್ರಮವಾಗಿ, ವಿದ್ಯುತ್ ಸಂಪರ್ಕ ಸೇರಿದಂತೆ ಸಕಲ ಸಿದ್ದತೆಗಳನ್ನು ಕೈಗೊಂಡಿದ್ದಾರೆ.

ಜಿಲ್ಲಾ ಕೇಂದ್ರ ಮತ್ತು ವಿವಿಧ ತಾಲೂಕು ಕೇಂದ್ರಗಳಿಂದ ನಗರಕ್ಕೆ ಬರುವ ಭಕ್ತರ ಪ್ರಯಾಣಿಕರ ಅನುಕೂಲಕ್ಕಾಗಿ ಸ್ಥಳಿಯ ಸಾರಿಗೆ ಸಂಸ್ಥೆಯವರು ಸಿದ್ದತೆ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಟ್ರಾಫಿಕ್ ಹಾಗೂ ಕಳ್ಳರ ಮತ್ತು ಅನೈತಿಕ ಚಟುವಟಿಕೆ ನಿಯಂತ್ರಣಕ್ಕಾಗಿ ಪೊಲೀಸರು ಸಹ ನಗರದಾದ್ಯಂತ ಮುನ್ನೆಚ್ಚರಿಕೆ ಕ್ರಮವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದಾರೆ.

ಮಾ. 18ರಂದು ರಾತ್ರಿ 8 ಗಂಟೆಯಿಂದ ಗ್ರಾಮದೇವಿಯ ರಥೋತ್ಸವದ ಭವ್ಯ ಮೆರವಣಿಗೆ

ರಾಜ್ಯ, ಹೊರ ರಾಜ್ಯಗಳ ಸುಪ್ರಸಿದ್ದ ಕಲಾ ತಂಡಗಳು ಮೇರವಣಿಗೆಗೆ ಮೆರಗು ನೀಡಲಿವೆ. 19ರಂದು ಬೆಳಿಗ್ಗೆ 6ರಿಂದ ಪಾದಗಟ್ಟಿಯಲ್ಲಿ ಗ್ರಾಮದೇವಿಯ ಪ್ರತಿಷ್ಠಾಪನೆ ಹಾಗೂ ಸಾಮಪ್ರದಾಯಿಕ ವಿಧಿ ವಿಧಾನಗಳು ಜರುಗುವವು.

21ರಂದು ದೇವಿಗೆ ಉಡಿತುಂಬಲು ತವರೂರಿನವರಾದ ಬೈಚವಳ್ಳಿ, ಚೀರನಹಳ್ಳಿ, ಗುಡಗುಡಿ, ರಾ.ಹೊಸಕೊಪ್ಪ, ಹಸನಬಾದಿ, ದಶರಥಕೊಪ್ಪ ಬಸಾಪುರ, ಗಡಗುಂಡಿಯಲ್ಲಾಪುರ, ಮಲ್ಲಿಗಾರ, ಸಾತೇನಹಳ್ಳಿ ಭಕ್ತರು ಶ್ರದ್ಧಾಭಕ್ತಿಯಿಂದ ಭವ್ಯ ಮೆರವಣಿಗೆಯೊಂದಿಗೆ ಆಗಮಿಸಿ, ಊಡಿ ತುಂಬುವ ಕಾರ್ಯಕ್ರಮ ನೆರವೇರಿಸಿಕೊಡುವರು.

ಸಂಜೆ 6 ಗಂಟೆಗೆ ಹೆಡೆ ತಂಡದವರಿಂದ ಯಕ್ಷಗಾನ ಮತ್ತು ಸಂಜೆ 8 ಗಂಟೆಗೆ ಸಾಗರ ತುರುವೆಕೆರೆ ಇವೆಂಟ್ಸ್ ತಂಡದಿಂದ ಹಾಸ್ಯ ಹಾಗೂ ರಸಮಂಜರಿ ಕಾರ್ಯಕ್ರಮ ಜರುಗುವವು, 24 ಮತ್ತು 25ರಂದು ಮದ್ಯಾಹ್ನ 3 ಗಂಟೆಯಿಂದ ಗ್ರಾಮದೇವಿ ದೇವಸ್ಥಾನದ ಎದುರಿನ ದನಬೆದರಿಸುವ ಕ್ರೀಡಾಂಗಣದಲ್ಲಿ ಭಾರಿ ಜಂಗೀ ನಿಖಾಲಿ ಕುಸ್ತಿಗಳು ನಡೆಯಲಿದ್ದು, ರಾಜ್ಯ ಮತ್ತು ಹೊರ ರಾಜ್ಯದ ಸುಪ್ರಸಿದ್ದ ಪೈಲ್ವಾನರುಗಳು ಆಗಮಿಸುವರು.

ಕುಸ್ತಿಯಲ್ಲಿ ಜಯಗಳಿಸಿದವರಿಗೆ ಪರಿಸಿ ಪೈಕಿ ಬೆಳ್ಳಿಕಡೆ ಹಾಗೂ 25 ಸಾವಿರ, ವಾರಸಿ ಪೈಕಿ ಬೆಳ್ಳಿ ಕಡೆ 20 ಸಾವಿರ ರೂ, ಕಿರಾಣಿ ಪೈಕಿ ಬೆಳ್ಳಿಕಡೆ 15 ಸಾವಿರ ಬಹುಮಾನ ಹಾಗೂ ಪೈಲ್ವಾನರಿಗೆ ಊಟದ ವ್ಯವಸ್ಥೆ ಇರುತ್ತದೆ. ಗ್ರಾಮದೇವಿಯ ಜಾತ್ರೋತ್ಸವದ ನಿಮಿತ್ತ ದಿ.ಸಿ.ಎಂ ಉದಾಸಿ ಕಲ್ಯಾಣ ಮಂಟಪದ ಎದುರಿನ ವಿಶಾಲವಾದ ಜಾಗೆಯಲ್ಲಿ ಜಾತ್ರೋತ್ಸವದಂದು ಮನೋರಂಜನಾ ಆಟಗಳು ಜರುಗಲಿವೆ. ಶಾಂತಿ ಸೌಹಾರ್ದತೆಯಿಂದ ಜಾತ್ರೆಯನ್ನು ನಡೆಸಲು ಹಾಗೂ ಸರ್ವರೂ ದೇವಿಯ ಕೃಪಾರ್ಶಿವಾದಕ್ಕೆ ಪಾತ್ರರಾಗಬೇಕೆಂದು ಶಾಸಕ ಜಾತ್ರೋತ್ಸವದ ಗೌರವಾಧ್ಯಕ್ಷರಾದ ಶ್ರೀನಿವಾಸ್ ಮಾನೆ, ಜಾತ್ರಾ ಕಮಿಟಿಯ ಅಧ್ಯಕ್ಷ ಮಂಜುನಾಥ ನಾಗಜ್ಜನವರ, ಉಪಾಧ್ಯಕ್ಷ ಸುರೇಶ ಪೂಜಾರ, ಕಾರ್ಯದರ್ಶಿ ಗಣೇಶ ಮೂಡ್ಲಿಯವರ, ಖಜಾಂಚಿ ರಾಜುಗೌಳಿ ಜಾತ್ರೋತ್ಸವ ಕಮಿಟಿಯ ಸಮಸ್ತರು ಮನವಿ ಮಾಡಿದ್ದಾರೆ.

**ಹಾವೇರಿ ಕೆಎಂಎಫ್ ನಿರ್ದೇಶಕರಾಗಿ ನೂತವಾಗಿ ಆಯ್ಕೆಯಾದ ಪ್ರಕಾಶ ಬನ್ನಿಹಟ್ಟಿ ಇವರನ್ನು ಬ್ಯಾಡಗಿಯ ನ್ಯಾಯವಾದಿಗಳ ಸಂಘದ ಆಶ್ರಯದಲ್ಲಿ ಶನಿವಾರ ಸನ್ಮಾನಿಸಿ ಗೌರವಿಸಲಾಯಿತು. ಹಿರಿಯಶ್ರೇಣಿ ದಿವಾಣಿ ನ್ಯಾಯಾಧೀಶ ಅಮೋಲ ಹಿರೇಕುಡೆ, ಕಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ಸುರೇಶ ವಗ